ದಿನಾಂಕ 16-12-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರನ್ನು ಹಾಗೂ 2 ನೇ ಎದುರುದಾರರ ಪರ ವಕೀಲರನ್ನು ಕರೆಯಿಸಲಾಗಿ ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರ ಪರ ADGP ರವರಿಂದಃ**

ಈ ಅರ್ಜಿಯನ್ನು ನಾನು ನಮ್ಮ ನಮ್ಮ ಜಮೀನಿನಲ್ಲಿ ಕಾಲುವೆ ಹೋಗಿದ್ದು ಅದಕ್ಕೆ ಪರಿಹಾರ ಹಣ ಕೋರಿ ಸಲ್ಲಿಸಿರುತ್ತೇನೆ. 1987-88 ರಲ್ಲಿ ಸರಕಾರದವರು ಕಾಲುವೆ ಉದ್ದೇಶಕ್ಕೆ ನನ್ನ ಜಮೀನು ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ನಿಜ. ಆ ಸಮಯದಲ್ಲಿ ನನ್ನ ತಂದೆ ಜೀವಂತವಿದ್ದರು ಎಂದರೆ ನಿಜ. ಎದುರುದಾರರು ನಮ್ಮ ತಂದೆ ಹಾಗೂ ಇತರರನ್ನು ಕರೆಯಿಸಿ ಕೇಳಿ ಅವರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸರಕಾರಿ ಅಧಿಕಾರಿಗಳು ಜಮೀನುಗಳಿಗೆ ಭೇಟಿ ನೀಡಿ ಜಮೀನುಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿ ದರ ನಿಗದಿಪಡಿಸಿ ಪರಿಹಾರ ಧನ ವಿತರಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿಗೆ ನಿಗದಿಪಡಿಸಿದ ಪರಿಹಾರ ಧನ ನಮ್ಮತಂದೆಗೆ ತೃಪ್ತಿಕರವಾಗಿದ್ದ ಕಾರಣ ನಮ್ಮ ತಂದೆ ಸರಕಾರದವರು ನೀಡಿದ ಪರಿಹಾರ ಧನ ಪಡೆದುಕೊಂಡು ಹೆಚ್ಚಿಗೆ ಹಣ ಬೇಕು ಅಂತಾ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ಹೆಚ್ಚಿಗೆ ಪರಿಹಾರ ಧನ ಬೇಕೆಂದು ಅರ್ಜಿ ಸಲ್ಲಿಸಿಲ್ಲ ಆದರೆ ನಾವು ಸಲ್ಲಿಸಿರುತ್ತೇವೆ.

ನಮ್ಮ ತಂದೆ ಮೃತಪಟ್ಟು ಸುಮಾರು 20 ವರ್ಷಗಳಾಗಿವೆ. ನಮ್ಮ ತಂದೆಯವರ ಮರಣ

ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ನಮ್ಮ ತಂದೆಗೆ ಇಬ್ಬರು ಮಕ್ಕಳು. ಅವರೆಂದರೆ ನಾನು ಖಾದರಪಾಶಾ ಇನ್ನೊಬ್ಬ ಚಂದಾಹುಸೇನ ಮೃತಪಟ್ಟಿರುತ್ತಾರೆ. ಸದರಿ ಚಂದಾಹುಸೇನ ಮೃತಪಟ್ಟಿದ್ದು ಆತನ ಹೆಂಡತಿ ಮಕ್ಕಳು ಜೀವಂತವಾಗಿದ್ದಾರೆ. ನಮ್ಮ ಅಣ್ಣನ ಹೆಂಡತಿ ಹಾಗೂ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

ನಾನು Protest Petition ನ್ನು ಎದುರುದಾರರ ಕಚೇರಿಯಲ್ಲಿ ಈಗ ಸುಮಾರು 10 ವರ್ಷಗಳ ಹಿಂದೆ ಸಲ್ಲಿಸಿದ್ದೆ. ಸರಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ಅದು ಒಣಬೇಸಾಯ ಜಮೀನು ಆಗಿತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ಈಗ ನೀರಾವರಿ ಜಮೀನು ಆಗಿದೆ ಎಂದು ನುಡಿಯುತ್ತಾರೆ.

ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಜಮೀನಿನಲ್ಲಿ ವರ್ಷಕ್ಕೆ ಒಂದೇ ಬೆಳೆ ಬೆಳೆಯುತ್ತಿದ್ದೆವು ಎಂದರೆ ನಿಜ. ಸರಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸದರಿ ಜಮೀನಿನಲ್ಲಿ ಏನು ಬೆಳೆ ಬೆಳೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಂತಹ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಿಪಿ–6 ರಲ್ಲಿ ಪ್ರಕರಣದ ಜಮೀನು ನಮ್ಮ ಜಮೀನಿಗಿಂತ ದೂರದಲ್ಲಿದೆ ಎಂದರೆ ನಿಜ. ನಿಪಿ–6 ರ ಪ್ರಕರಣದಲ್ಲಿನ ಜಮೀನಿನ ಗುಣಲಕ್ಷಣ ಹಾಗೂ ಫಲವತ್ತತೆ ಹಾಗೂ ಜಮೀನಿನ ಗುಣಲಕ್ಷಣ ಹಾಗೂ ಫಲವತ್ತತೆ ಬೇರೆ ಬೇರೆಯಾಗಿದೆ ಎಂದರೆ ಸರಿಯಲ್ಲ. ಸರಕಾರದವರು ಸ್ವಾಧೀನಪಡಿಸಿಕೊಂಡ ನಮ್ಮ ಜಮೀನಿಗೆ ನಿಗದಿಪಡಿಸಿದ ಪರಿಹಾರ ಧನ ಸರಿಯಾಗಿದೆ ಎಂದರೆ ಸರಿಯಲ್ಲ. ಹೆಚ್ಚಿಗೆ ಪರಿಹಾರ ಧನ ಪಡೆಯುವ ಉದ್ದೇಶದಿಂದ ಈ ಕೇಸು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸರಕಾರದವರು ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಕೊಡಬೇಕಾದದಂತಹ ಪರಿಹಾರ ಧನ ಹಾಗೂ ಇತರೆ (ನಷ್ಟ ಪರಿಹಾರ ಧನ)ಕೊಟ್ಟಿರುವ ಹಣ ಸರಿಯಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲು ಮಾಡಲು ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ